ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 13 ಟಿಟಿಪಿ 2020 (ಇ-ಕಡತ)

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 23.10.2020.

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ನಗರಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ,

1. ಆಯುಕ್ತರು,
   ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
   ಬೆಂಗಳೂರು.
2. ಆಯುಕ್ತರು,
   ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
3. ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಹೊಸಪೇಟೆ.
4. ಸದಸ್ಯ ಕಾರ್ಯದರ್ಶಿಗಳು,
   ಎಲ್ಲಾ ಯೋಜನಾ ಪ್ರಾಧಿಕಾರಗಳು.
5. ಮುಖ್ಯಾಧಿಕಾರಿ/ಪೌರಾಯುಕ್ತರು,
   ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರಗಳು.

ಮಾನ್ಯರೆ,

ವಿಷಯ: ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2019ರಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ಪ್ರಾಧಿಕಾರದಲ್ಲಿ ಪಾವತಿಸಿಕೊಳ್ಳುವ ಬಗ್ಗೆ ಸ್ಪಷ್ಟೀಕರಣದ ಕುರಿತು.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 3 ಟಿಟಿಪಿ 2015, ದಿನಾಂಕ:25.02.2020.
2. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ರವರ ಏಕ ಕಡತ ಸಂಖ್ಯೆ:DTCP-40-MIC-2020-21.

******

ವಿಷಯಕ್ಕೆ ಸಂಬಂಧಿಸಿದಂತೆ, ಘೋಷಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 15, 17 ಮತ್ತು 14ಎ ರಡಿಯಲ್ಲಿ ವಿವಿಧ ಅಭಿವೃದ್ಧಿಗಳಿಗೆ ಅನುಮತಿಸುವ ಸಂದರ್ಭದಲ್ಲಿ ಇದೇ ಕಾಯ್ದೆ ಕಲಂ 18(1) ಮತ್ತು 18-ಎ ರಡಿಯಲ್ಲಿ ಶುಲ್ಕ ಪಾವತಿಸಿಕೊಳ್ಳುವ ಬಗ್ಗೆ ಶುಲ್ಕಗಳನ್ನು ಪರಿಷ್ಕರಿಸಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2019ನ್ನು ಅಧಿಸೂಚಿಸಲಾಗಿದೆ.

ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳನ್ವಯ ಶುಲ್ಕ ಪಾವತಿಸಿಕೊಳ್ಳುವ ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, ಕಲಂ 76(ಕೆ) ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶುಲ್ಕವನ್ನು ಪಾವತಿಸಿಕೊಳ್ಳುವ ಕುರಿತಂತೆ ಈ ಕೆಳಕಂಡಂತೆ ಸ್ಪಷ್ಟನೆಯನ್ನು ನೀಡಲಾಗಿದೆ.

1. ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2019 ನಿಯಮವು ದಿನಾಂಕ:25.02.2020 ರಂದು ಕರ್ನಾಟಕ ರಾಜ್ಯ ಗೆಜೆಟ್ ನಲ್ಲಿ ಅಧಿಸೂಚಿಸಲಾಗಿದ್ದು, ಸದರಿ ದಿನಾಂಕದಿಂದಲೇ ನಿಯಮಗಳು ಜಾರಿಗೆ ಬಂದಿರುತ್ತದೆ.
2. ಯೋಜನಾ ಪ್ರಾಧಿಕಾರವು ವಿವಿಧ ಅಭಿವೃದ್ಧಿಗಳಿಗೆ ಕೆ.ಟಿ.ಸಿ.ಪಿ. ಕಾಯ್ದೆಯಡಿಯಲ್ಲಿ ಅನುಮತಿಸಲು ಈಗಾಗಲೇ ಅನುಮೋದನೆ ನೀಡಲು ನಿರ್ಣಯಿಸಿದ್ದಾಗ್ಯೂ ಸದರಿ ತಿದ್ದುಪಡಿ ನಿಯಮಗಳು ಜಾರಿಗೆ ಬಂದ ದಿನಾಂಕ:25.02.2020 ನ್ನೊಳಗೊಂಡಂತೆ ನಂತರದ ದಿನಾಂಕಗಳಂದು ಶುಲ್ಕ ಪಾವತಿಸಲು ಕರ್ನಾಟಕ ಯೋಜನಾ ಪ್ರಾಧಿಕಾರದ

...2.

Scanned with CamScanner

ನಿಯಮಗಳು ನಿಯಮ 37-ಎ (2) ರಲ್ಲಿ ನಿಗದಿಪಡಿಸಲಾದ ನಮೂನೆ-VIII ರಂತೆ ನೋಟಿಸನ್ನು ನೀಡುವಾಗ ಕಡ್ಡಾಯವಾಗಿ ಸದರಿ ಉಲ್ಲೇಖಿತ ತಿದ್ದುಪಡಿ ನಿಯಮಗಳಲ್ಲಿ ಉಲ್ಲೇಖಿಸಿರುವ ದರಗಳನ್ವಯ ಶುಲ್ಕದ ಮೊತ್ತವನ್ನು ಪಾವತಿಸುವಂತೆ ನೀಡಲಾಗಿರುವ ಸೂಚನೆಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.

3. ಯೋಜನಾ ಪ್ರಾಧಿಕಾರದಿಂದ ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 17ರಡಿ ವಿನ್ಯಾಸಗಳಿಗೆ ಈಗಾಗಲೇ ತಾತ್ಕಾಲಿಕ ಅನುಮೋದನೆ ನೀಡಿ ದಿನಾಂಕ:25.02.2020 ರ ಪೂರ್ವದಲ್ಲಿದ್ದಂತಹ ಶುಲ್ಕ ಪಾವತಿಸಿಕೊಂಡು ಅನುಮೋದನೆ ನೀಡಿ ವಿನ್ಯಾಸ ನಕ್ಷೆಯನ್ನು ಬಿಡುಗಡೆ ಮಾಡಿದ್ದಲ್ಲಿ ಸದರಿ ತಿದ್ದುಪಡಿ ನಿಯಮಗಳ ಶುಲ್ಕಗಳ ದರಗಳು ಅಂತಹ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ.

ಅಲ್ಲದೇ, ತಾತ್ಕಾಲಿಕ ಅನುಮೋದನೆಯಾದ ವಿನ್ಯಾಸದಲ್ಲಿನ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಿ ವಿನ್ಯಾಸದ ಅಂತಿಮ ಅನುಮೋದನೆಗಾಗಿ ಹಾಗೂ ನಿವೇಶನ ಬಿಡುಗಡೆಗಾಗಿ ಕೋರಿಕೆ ಬಂದಂತಹ ಸಂದರ್ಭದಲ್ಲಿಯೂ ಸಹ ಸದರಿ ತಿದ್ದುಪಡಿ ನಿಯಮಗಳಲ್ಲಿ ಉಲ್ಲೇಖಿಸಿರುವ ದರಗಳಂತೆ ವ್ಯತ್ಯಾಸ ಶುಲ್ಕದ ಮೊತ್ತವನ್ನು ಪಾವತಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

4. ಯೋಜನಾ ಪ್ರಾಧಿಕಾರದಿಂದ ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 17ರಡಿ ವಿನ್ಯಾಸಗಳಿಗೆ ಈಗಾಗಲೇ ಅನುಮೋದನೆ ನೀಡಿ ದಿನಾಂಕ:25.02.2020ರ ಪೂರ್ವದಲ್ಲಿ ಜಾರಿಯಲ್ಲಿದ್ದ ನಿಯಮಗಳಂತೆ ಶುಲ್ಕ ಪಾವತಿಸಿಕೊಂಡು ಶೇ.40:ಶೇ:30:ಶೇ.30 ರ ಅನುಪಾತದಲ್ಲಿ ವಿನ್ಯಾಸದ ನಿವೇಶನಗಳನ್ನು ವಿವಿಧ ಹಂತಗಳಲ್ಲಿ ಬಿಡುಗಡೆ ಮಾಡಿದ್ದಲ್ಲಿ ಆಯಾ ಹಂತದಲ್ಲಿ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡ ನಂತರ ನಿವೇಶನಗಳ ಬಿಡುಗಡೆಗೆ ಕೋರಿದ್ದಲ್ಲಿ ವಿನ್ಯಾಸದಲ್ಲಿನ ಉಳಿದ ನಿವೇಶನಗಳ ಬಿಡುಗಡೆಗೆ ಉಲ್ಲೇಖಿತ ತಿದ್ದುಪಡಿ ನಿಯಮದ ಶುಲ್ಕವು ಅನ್ವಯಿಸುವುದಿಲ್ಲ.

5. ಯೋಜನಾ ಪ್ರಾಧಿಕಾರದಿಂದ ನಿರ್ದಿಷ್ಟ ಭೂ ಪರಿವರ್ತಿತ ಜಮೀನುಗಳಿಗೆ ವಿನ್ಯಾಸ ಅನುಮೋದನೆ ನೀಡುವ ಸಂದರ್ಭದಲ್ಲಿ ಪ್ರಶ್ನಿತ ಜಮೀನುಗಳ ಮಾರುಕಟ್ಟೆ ದರ (Market Value) ಗಳನ್ವಯ ಶುಲ್ಕಗಳನ್ನು ಪಾವತಿಸಿಕೊಳ್ಳತಕ್ಕದ್ದು.

6. ವಿನ್ಯಾಸದ ಯಾವುದೇ ಮಾರ್ಪಾಡುವಿಕೆ ಸಂದರ್ಭದಲ್ಲಿ ವಿನ್ಯಾಸದಲ್ಲಿ ಒಳಗೊಂಡಿರುವ ಸ.ನಂ.ಗಳು ಹಾಗೂ ವಿಸ್ತೀರ್ಣದಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಮಾರ್ಪಾಡು ವಿನ್ಯಾಸ ಅನುಮೋದನೆಗಾಗಿ ಕೋರಿಕೆ ಸಲ್ಲಿಕೆಯಾದಲ್ಲಿ ದಿನಾಂಕ:25.02.2020ರ ತಿದ್ದುಪಡಿ ನಿಯಮಗಳಂತೆ ಶುಲ್ಕದ ದರಗಳನ್ನು ಪಾವತಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಆದರೆ ಮಾರ್ಪಾಡುವಿಕೆಗೆ ಸಲ್ಲಿಸಲಾದ ಪ್ರಸ್ತಾವನೆಯಲ್ಲಿ ಹೆಚ್ಚುವರಿಯಾಗಿ ಹೊಸದಾಗಿ ಭೂ ಪರಿವರ್ತಿತ ಜಮೀನುಗಳನ್ನು ಸೇರಿಸಿದ್ದಲ್ಲಿ ಹೆಚ್ಚುವರಿ ವಿಸ್ತೀರ್ಣದ ಪ್ರದೇಶಕ್ಕೆ ಅನ್ವಯಿಸುವಂತೆ ಉಲ್ಲೇಖದ ತಿದ್ದುಪಡಿ ನಿಯಮಗಳನ್ವಯ ಶುಲ್ಕದ ದರಗಳನ್ನು ವಿಧಿಸಿ ಕಡ್ಡಾಯವಾಗಿ ಪಾವತಿಸಿಕೊಳ್ಳತಕ್ಕದ್ದು.

7. ವಿನ್ಯಾಸವನ್ನು ಕಾರಣಾಂತರಗಳಿಂದ ರದ್ದುಗೊಳಿಸಿದ ಸಂದರ್ಭದಲ್ಲಿ, ವಿನ್ಯಾಸದಲ್ಲಿನ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳದೇ ಇದ್ದು ರದ್ದುಗೊಳಿಸಿದ ಸಂದರ್ಭದಲ್ಲಿ ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು, 1965ರ ನಿಯಮ 37-ಎ(2) ಅವಕಾಶದಂತೆ ವಿನ್ಯಾಸವು ರದ್ದುಗೊಂಡ ಸಂದರ್ಭದಲ್ಲಿ ಹೊಸದಾಗಿ ವಿನ್ಯಾಸ ಅನುಮೋದನೆಗಾಗಿ ಕೋರಿಕೆ ಸಲ್ಲಿಕೆಯಾದ ಪ್ರಕರಣಗಳಲ್ಲಿ ದಿನಾಂಕ:25.02.2020ರ ತಿದ್ದುಪಡಿ ನಿಯಮಗಳನ್ವಯ ಶುಲ್ಕದ ದರಗಳನ್ನು ವಿಧಿಸಿ ಮೊತ್ತವನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳತಕ್ಕದ್ದು.

8. ದಿನಾಂಕ:25.02.2020ರ ಅಧಿಸೂಚನೆಯನ್ವಯ ನಿಯಮ "Collection of Cess and Surcharge" ಕುರಿತಂತೆ 37-ಸಿ ಟಿಪ್ಪಣಿ (Note) ಸಂಖ್ಯೆ(i)ರಲ್ಲಿ ಸೂಚಿಸಿರುವಂತೆ ಕೆ.ಟಿ.ಸಿ.ಪಿ. ಕಾಯ್ದೆ ಕಲಂ15 ರಂತೆ ಕಟ್ಟಡ ಅಭಿವೃದ್ಧಿಗಳಿಗೆ ಅನುಮತಿಸುವ ಸಂದರ್ಭದಲ್ಲಿ ಸಂಬಂಧಿತ ಯೋಜನಾ ಪ್ರಾಧಿಕಾರಗಳು/ಸ್ಥಳೀಯ ಸಂಸ್ಥೆಗಳು ನಿಯಮಾನುಸಾರ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳತಕ್ಕದ್ದು. ಆದರೆ, ಕೆ.ಟಿ.ಸಿ.ಪಿ. ಕಾಯ್ದೆ ಕಲಂ 17ರಡಿಯಲ್ಲಿ ಸದರಿ ಶುಲ್ಕಗಳನ್ನು ಪಾವತಿಸಿ ಅನುಮೋದನೆ ಪಡೆದ ಪ್ರಕರಣಗಳಲ್ಲಿ ಕಟ್ಟಡ ಅಭಿವೃದ್ಧಿಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸದರಿ Cess and Surcharge ಅನ್ನು ಪುನಃ ಪಾವತಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.

„3

Scanned with CamScanner

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ
ಕರ್ನಾಟಕ ಸರ್ಕಾರ
ಬಹುಮಹಡಿಗಳ ಕಟ್ಟಡ, ಗೇಟ್-4
ಪಿ.ಬಿ. ನಂ. 5257
ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ
ಬೆಂಗಳೂರು-560 001
ದೂರವಾಣಿ ಸಂ: 080-22213988

ತಿದ್ದುಪಡಿ ನಿಯಮಗಳು ದಿನಾಂಕ:25.02.2020 ರಂದು ಜಾರಿಗೆ ಬರಲಿದ್ದು, ಯೋಜನಾ ಪ್ರಾಧಿಕಾರಗಳು ನಿರ್ದಿಷ್ಟ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಈ ಮೇಲ್ಕಂಡ ನಿರ್ದೇಶನಗಳನ್ನು ತಪ್ಪದೇ ಪಾಲಿಸತಕ್ಕದ್ದು. ಒಂದು ವೇಳೆ ಸದರಿ ನಿರ್ದೇಶನಗಳಿಗೆ ವ್ಯತಿರಿಕ್ತವಾಗಿ ಕ್ರಮ ಕೈಗೊಂಡಲ್ಲಿ ಸಂಬಂಧಿಸಿದ ಆಯುಕ್ತರು/ಸದಸ್ಯ ಕಾರ್ಯದರ್ಶಿಗಳು/ಮುಖ್ಯಾಧಿಕಾರಿಗಳು/ ಪೌರಾಯುಕ್ತರು ಗಳ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಈ ಆದೇಶದಲ್ಲಿನ ನಿರ್ದೇಶನಗಳ ಕುರಿತು ಯಾವುದೇ ಸಂದೇಹಗಳಿಗೆ ಸರ್ಕಾರದಿಂದ ನಿರ್ದಿಷ್ಟ ನಿರ್ದೇಶನ ಪಡೆದು ಕ್ರಮವಹಿಸುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಎಸ್. ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ನಗರಾಭಿವೃದ್ಧಿ ಇಲಾಖೆ.

ಸಂಖ್ಯೆ: ನಗ್ರಾಯೋ:ಜಂನಿ:30:CIRC:2020-21
ಸರ್ಕಾರದ ಆದೇಶ ಸಂಖ್ಯೆ: ನಅಇ 13 ಟಿಟಿಪಿ 2020 (ಇ-ಕಡತ),
ಬೆಂಗಳೂರು, ದಿನಾಂಕ:23-10-2020.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 29 OCT 2020

ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ.
2. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
3. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ ಕಲಬುರಗಿ.
4. ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
5. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
6. ಮುಖ್ಯಾಧಿಕಾರಿಗಳು/ಆಯುಕ್ತರು, ಪುರಸಭೆ/ನಗರಸಭೆ ಯೋಜನಾ ಪ್ರಾಧಿಕಾರಗಳು.
7. ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗಳಿಗೆ.
8. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿ ಹಾಗೂ ತಾಂತ್ರಿಕ ಸಿಬ್ಬಂದಿಗಳಿಗೆ.
9. ಸದರಿ ಸುತ್ತೋಲೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ.
10. ಸದರಿ ಸುತ್ತೋಲೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ತಾಂತ್ರಿಕ ವಿಭಾಗದ ಇ-ಮೇಲ್ ವಿಷಯ ನಿರ್ವಾಹಕರಿಗೆ.
11. ಹೆಚ್ಚುವರಿ ಪ್ರತಿಗಳು.

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರ ಪರವಾಗಿ

35 NK(Suma)Circ

Scanned with CamScanner